		3. ಹಿರೇಕೆರೆ (ಹೊಳಯಲ್ಲಾಪುರ ಕೆರೆ ಹೊಳೆತ್ತುವುದು ರೈತರ ಸಹಯೋಗ)	30.00	-
		4. ವರವಿನಾಗಲಾವಿ ಕೆರೆ ಆಧುನೀಕರಣ	15.00	-
		5. ಹೊಸಎಲ್ಲಾಪುರ ಕೆರೆ ಕಾಲುವೆ ಸುಧಾರಣೆ	8.00	4 ತಿಂಗಳು ಮಳೆಗಾಲ ಹೊರತುಪಡಿಸಿ
		6. ಮುರಕಟ್ಟಿ ಕೆರೆ ಸುಧಾರಣೆ	5.00	-
		7. ನರೇಂದ್ರ ಕೆರೆಕಾಲುವೆ ಸುಧಾರಣೆ	4.00	3 ತಿಂಗಳು ಮಳೆಗಾಲ ಹೊರತುಪಡಿಸಿ
		8. ವೀರಾಪುರ ಕೆರೆ ಎಡ ದಂಡೆ ಕಾಲುವೆ ಸುಧಾರಣೆ	5.00	3 ತಿಂಗಳು ಮಳೆಗಾಲ ಹೊರತುಪಡಿಸಿ
3.	ಹುಬ್ಬಳ್ಳಿ	1. ಬುಡನಾಳ ಕೆರೆ ಆಧುನೀಕರಣ	15.00	-
		2. ಇನಾಂವೀರಾಪುರ ಹತ್ತಿರ ಬಂದಾರ ರಚನೆ	10.00	-
4.	ಕುಂದಗೋಳ	1. ಗೌಡಗೇರಿ ಕೆರೆ ಹಾಗೂ ಕಾಲುವೆ ಸುಧಾರಣೆ	30.00	12 ತಿಂಗಳು ಮಳೆಗಾಲ ಹೊರತುಪಡಿಸಿ
	ಒಟ್ಟು : 18		532.79	

ಧಾರವಾಡ ನಗರದ ಬಂದಿಖಾನೆಯ ವಿವರ

300(699) - ಶ್ರೀ ಬೆಲ್ಲದ್ ಚಂದ್ರಕಾಂತ ಗುರಪ್ಪ (ಧಾರವಾಡ) : ಮಾನ್ಯ ಬಂದೀಖಾನೆ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಧಾರವಾಡ ನಗರ ಬಂದೀಖಾನೆ ಯಾವ ವರ್ಷದಲ್ಲಿ ಪ್ರಾರಂಭಿಸಲಾಗಿದೆ; ಇದರ ಭೂ ಪ್ರದೇಶವೆಷ್ಟು?

ಆ) ಇದರಲ್ಲಿ ಯಾವ ತರಹದ ಅಪರಾಧ ಮಾಡಿದವರನ್ನು ಇಡಲಾಗುವುದು? ಮತ್ತು ಸದ್ಯ ಇರುವ ವಿವಿಧ ವಯೋಮಾನದ ಅಪರಾಧಿಗಳು (ಪುರುಷರ: ಮಹಿಳೆಯರ) ಸಂಖ್ಯೆಯ ವಿವರ ನೀಡುವುದು.

ಇ) ಅಪರಾಧಿಗಳಿಗೆ ಮಾನಸಿಕ, ಬೌದ್ಧಿಕ ಮತ್ತು ಶಾರೀರಿಕವಾದ ಮಾನವ ಶಕ್ತಿಯ ಪ್ರಯೋಜನವಾಗಲು ಯಾವ ಪ್ರಕಾರದ ಕೆಲಸ ಕಾರ್ಯಗಳು ನಡೆಯುತ್ತಿವೆ?

ಈ) ಸದರಿ ಬಂದೀಖಾನೆಯ ಮೇಲ್ದರ್ಜೆಗೇರಿಸಲು ಮತ್ತು ಅಗತ್ಯವಾದ ಕಟ್ಟಡಗಳು ಮತ್ತು ಮೂಲಭೂತ ಸೌಲಭ್ಯ ಒದಗಿಸಲು ಸರಕಾರ ಯಾವ ಯೋಜನೆಯನ್ನು ಕೈಗೊಳ್ಳಲಿದೆ? ತಿಳಿಸುವುದು.

ಶ್ರೀ ರಾಜ ಅಮರೇಶ್ವರ ನಾಯಕ್ (ಬಂದೀಖಾನೆ ಸಚಿವರು):

ಅ) 1858 ರಲ್ಲಿ ಪ್ರಾರಂಭಿಸಲಾಗಿದೆ. ಇಲ್ಲಿನ ಭೂ ಪ್ರದೇಶದ ವಿಸ್ತೀರ್ಣ 70 ಎಕರೆ 20 ಗುಂಟೆ.

ಆ) ಜಿಲ್ಲಾ ಉಪ ಕಾರಾಗೃಹ, ಧಾರವಾಡ:

ಇಲ್ಲಿ ಎಲ್ಲಾ ತರಹದ ಅಪರಾಧ ಎಸಗಿರುವ ವಿಚಾರಣಾ ಬಂದಿಗಳನ್ನು ಮತ್ತು 3 ತಿಂಗಳ ಒಳಗಿನ ಅವಧಿಗೆ ಶಿಕ್ಷೆಯಾದ ಸಜಾ ಬಂದಿಗಳನ್ನು ಇಲ್ಲಿ ಇಡಲಾಗುವುದು.

18 ರಿಂದ 25 ವರ್ಷ ವಯೋಮಿತಿ ಒಳಗಿನ 47 ಪುರುಷ ಬಂದಿಗಳು.

16 ರಿಂದ 21 ವಯೋಮಿತಿ ಒಳಗಿನ 74 ಪುರುಷ + 7 ಮಹಿಳಾ ಬಂದಿಗಳು

21 ರಿಂದ 50 ವಯೋಮಿತಿ ಒಳಗಿನ 80 ಪುರುಷ + 15 ಮಹಿಳಾ ಬಂದಿಗಳು

50 ರಿಂದ 70 ವಯೋಮಿತಿ ಒಳಗಿನ 46 ಪುರುಷ ವಿಚಾರಣಾಧೀನ ಬಂದಿಗಳು ಇರುತ್ತಾರೆ.

ಇ) ವಿವಿಧ ಸಂಘ ಸಂಸ್ಥೆಗಳ ನೆರವಿನೊಂದಿಗೆ ಬಂದಿಗಳ ಪುನಃ ಪರಿವರ್ತನೆಗಾಗಿ ಶಿಬಿರಗಳನ್ನು ಆಯೋಜಿಸಲಾಗುತ್ತಿರುತ್ತದೆ.

ವಯಸ್ಕರ ಶಿಕ್ಷಣ ಇಲಾಖೆಯ ಸಹಾಯದಿಂದ ಅನಕ್ಷರಸ್ಥ ಬಂದಿಗಳನ್ನು ಅಕ್ಷರಸ್ಥರನ್ನಾಗಿ ಮಾಡಲು ಶಾಲೆಗಳು ನಡೆಯುತ್ತಿವೆ.

ಸಂಸ್ಥೆಯ ಬಂದಿಗಳ ಮಾನವ ಶಕ್ತಿಯನ್ನು ಸದುಪಯೋಗಿಸಿಕೊಳ್ಳಲು ಅನುವಾಗುವಂತೆ ಬಡಗಿತನ, ನೇಯ್ಗೆ, ಹೊಲಿಗೆ ಮತ್ತು ತೋಟಗಾರಿಕೆಯಿಂದ ವಿವಿಧ ಕೈಗಾರಿಕೆಗಳು ಚಾಲ್ತಿಯಲ್ಲಿರುತ್ತವೆ.

ಈ) ಅನುದಾನ ಲಭ್ಯತೆಯ ಆಧಾರದ ಮೇಲೆ ಇದನ್ನು ಹಂತ ಹಂತವಾಗಿ ಕೈಗೊಳ್ಳಲಾಗುವುದು.

ಧಾರವಾಡ ಜಿಲ್ಲೆಯಲ್ಲಿ ಜಲಸಂವರ್ಧನೆಗೆ ಸಂಘಗಳ ಕಾರ್ಯಗಳು

301(702) - ಶ್ರೀ ಬೆಲ್ಲದ್ ಚಂದ್ರಕಾಂತ್ ಗುರಪ್ಪ (ಧಾರವಾಡ): ಮಾನ್ಯ ಗೃಹ ಮತ್ತು ಸಣ್ಣ ನೀರಾವರಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಧಾರವಾಡ ಜಿಲ್ಲೆಯಲ್ಲಿ ಪ್ರಾರಂಭಿಸಿರುವ ಜಲಸಂವರ್ಧನೆಯ ಸಂಘಗಳ ವಿವರವನ್ನು ತಾಲ್ಲೂಕುವಾರು ಮಾಹಿತಿ ನೀಡುವುದು ಮತ್ತು ಎಂದಿನಿಂದ ಕೆಲಸ ಪ್ರಾರಂಭವಾಗಿರುವುದು; (ವಿವರ ನೀಡುವುದು)